ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ. ಸಂಖ್ಯೆ **66/2013**

| | | |
|---|---|---|
| ಸಾಕ್ಷಿದಾರರ ಹೆಸರು | ಮರಿಯಮ್ಮ | ಸಿ.ಡಬ್ಲ್ಯೂ-**4** |
| | | ಪಿ.ಡಬ್ಲ್ಯೂ-**3** |
| ಗಂಡನ ಹೆಸರು | ಜವಾನೀಸ್ | ದಿನಾಂಕ –**01-12-2021** |
| ವಯಸ್ಸು | **72** ವರ್ಷ | |
| ವೃತ್ತಿ | ಗೃಹಿಣಿ | |
| ವಾಸಸ್ಥಳ | ಮಠಸಾಗರ | |

ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಎ ಪಿ ಪಿ ಯವರಿಂದ

**2008** ರಿಂದ ನಾನು ಎರಡುವರೆ ವರ್ಷ ಮಳಲಿ ಗ್ರಾಮ ಪಂಚಾಯಿತಿಯಲ್ಲಿ ಉಪಾಧ್ಯಕ್ಷೆ ಆಗಿ ಇದ್ದೆ. ಆ ಸಮಯದಲ್ಲಿ ಕಾರ್ಯದರ್ಶಿ ಆಗಿ ಕಲವು ದಿನ ಗಣೇಶ ಮತ್ತು ಸಿದ್ದಬಸನೇಗೌಡ ಕೆಲಸ ಮಾಡಿದ್ದರು. ಮೋಹನ್ ರಾಜ ಬಿಲ್ ಕಲೆಕ್ಟರ್ ಆಗಿ ಇದ್ದರು. ಮೋಹನ್ ರಾಜ್ ಎಲ್ಲಾರ ವಿಶ್ವಾಸ ಗಳಿಸಿದ್ದನು, ಅವನು ಯಾರಿಗು ಗೊತ್ತಾಗದಂತೆ ಪಂಚಾಯಿತಿಯಲ್ಲಿ ಪೋರ್ಜರಿ ಸಹಿ ಮಾಡಿಸಿ ದುಡ್ಡೆಲ್ಲಾ ತೆಗೆದುಕೊಂಡಿದ್ದನು. ಆತನು ಚೆಕ್ಕಿನಲ್ಲಿ ಪೋರ್ಜರಿ ಮಾಡಿದ್ದನು. ನಂತರ ಆತನು ಪೋರ್ಜರಿ ಮಾಡಿದ ವಿಶಯ ಗೊತ್ತಾಯಿತು. ನಾನು ಅಧ್ಯಕ್ಷರಾಗಿದ್ದ ಸಮಯದಲ್ಲಿ ಪೋರ್ಜರಿ ಮಾಡಿ ನನ್ನ ಸಹಿ ಮಾಡಿದ್ದಾರೆ. ಆತನೇ ಸಿಲು ಮಾಡಿಸಿಕೊಂಡು ಇಟ್ಟಿಕೊಂಡಿದ್ದು ಅದನ್ನು ಉಪಯೋಗಿಸಿ ಪೋರ್ಜರಿ ಮಾಡುತ್ತಿದ್ದ. ಎಲ್ಲಾ ಬಿರುವಿನ ಕೀ ಆತನ ವಶದಲ್ಲಿ ಇದ್ದು ಆತನು ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದ. **14,38,000/-** ಸಾವಿರ ರೂ. ಅನ್ನು ಆತನು ಬೇರೆ ಬೇರೆ ಹೆಸರಿನಲ್ಲಿ ತೆಗೆದುಕೊಂಡು ಮೋಸ ಮಾಡಿರುತ್ತಾನೆ. ಈ ಹಣ ಕಾಮಗಾರಿಗೆ ಮನೆಗೆ ಮತ್ತು ಸಂಬಳಕ್ಕೆ ಬಂದ ಹಣ ಆಗಿತ್ತು. ಸದರಿ ಹಣವನ್ನು ಆತನು ತನಗೆ ಮನೆಗೆ ಕಟ್ಟಿಸಲು ಮತ್ತು ಊರ ಬಿಟ್ಟು ಹೋಗಲು ತಯಾರಿಸಿ ನಡೆಸಿದ್ದ ಈ ಬಗ್ಗೆ ನಮಗೆ ಗೊತ್ತಾಗಿ ಪೊಲೀಸು ಪಿರ್ಯಾದಿ ಕೊಟ್ಟಿದ್ದೇವೆ ಮತ್ತು ನನ್ನ ಹೇಳಿಕೆ ಕೊಟ್ಟಿದ್ದೇನೆ.

ಪಾಟೀ ಸವಾಲು ಶ್ರೀ ಎಸ್ ವಿ ಎಸ್ ರವರಿಂದ ಆರೋಪಿಯ ಪರವಾಗಿಃ

ಎಸ್ ವಿ ಎಸ್ ವಕೀಲರು ಗೈರು ಹಾಜರಾಗಿದ್ದಾರೆ ಅವರ ಕಿರಿಯ ವಕೀಲರು ಪಾಟೀ ಸವಾಲಿಗೆ ಸಮಯ ಅವಕಾಶ ಕೇಳಿದ್ದಾರೆ **2013** ನೇ ಇಸವಿಯ ಕೇಸು ಆಗಿದ್ದು ಈಗಾಗಲೇ ಹಲವಾರು ಸಮಯದಿಂದ ಕೇಸು ಫ್ರಾ.ಸ**-3** ರವರ ಸಾಕ್ಷಿ ವಿಚಾರಣೆಗೆ ಮುಂದೂಡಲಾಗಿದ್ದು, ಈ ದಿನ ಮುಂದೂಡಲು ಯಾವುದೇ ಕಾರಣ ಕಂಡು ಬರುವುದಿಲ್ಲ. ಚಾಸಾ**-4 72** ವರ್ಷದ ಸಿನಿಯರ್ ಸಿಟಿಜನ್ ಆದ ಕಾರಣ ಕೋರಿಕೆಯನ್ನು ತಿರಸ್ಕರಿಸಲಾಗಿದೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

<u>ಓ ಹೇ ಕೇ ಸ ಇ ಒ</u>

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.